

# ಈ ಮಣ್ಣು ನಮ್ಮದು

■ ಅನು ಬೆಳ್ಳೆ

ಚಿತ್ರ: ಗುರು ನಾವಳ್ಳಿ

**ಮಣ್ಣಿಂದ ಕಾಯ ಮಣ್ಣಿಂದ..
ಮಣ್ಣು ಬಿಟ್ಟವರಿಗೆ ಆಧಾರವಿಲ್ಲ...**

ಯಾರ ಮಣ್ಣಿನ ಋಣ ಎಲ್ಲಿರುವುದೋ? ಇರುವಾಗಲೆಲ್ಲ ನನ್ನದು ನಿನ್ನದೆನ್ನುವ ಮಮಕಾರದ ಅಂಧಾನುಕರಣೆಯಲ್ಲಿ ಬಿದ್ದು ಅನರ್ಥಕ್ಕೆ ದಾರಿ ಮಾಡಿಕೊಡುವುದು ಲೋಕಾಂತ. ಆಲೋಚನೆಗಳು ಮುರಿದೇಬಿಟ್ಟಂತೆ ಗಲಾಟೆ ಹಚ್ಚಿಕೊಂಡ ಮಕ್ಕಳ ಬೆನ್ನಿಗೆ ನಾಲ್ಕು ಬಾರಿಸಿ ಒಳಗೆ ಬಂದ ಸರಳಾ, ಮನೆಯ ಮೂಲೆಯಲ್ಲಿ ಜ್ಞಾನಾಸಕ್ತಸ್ಥಿತಿಯಲ್ಲಿ ಕುಳಿತಿದ್ದ ರಾಘವನನ್ನು ನೋಡಿ, 'ನೀವು ಹೀಗೆ ತಲೆಬಿಸಿ ಮಾಡಿಕೊಂಡರೆ ಏನೂ ಮಾಡ್ಲಿಕ್ಕೆ ಆಗುವುದಿಲ್ಲ. ಆ ಜಾಗಕ್ಕೆ ನಿಮ್ಮ ಅಪ್ಪ ಮತ್ತು ಅಜ್ಜ ಸೇರಿ ಪಾಗಾರ ಕಟ್ಟಿ ಅವರದ್ದಾಗಿ ಮಾಡಿಕೊಂಡದ್ದಲ್ವಾ? ಮೊದಲು ನಿಮ್ಮ ತೇಜಣ್ಣನಿಗೆ ಫೋನ್ ಮಾಡಿ ವಿಷಯ ತಿಳಿಸಿ. ಅವರು ಜಾಗೆಯ ವಿಷಯಕ್ಕೆ ಓಡಿಕೊಂಡು ಬಂದಾರು. ಉಳಿದದ್ದು ಎಂತ ಆಗ್ತದೇಂತ ಮತ್ತೆ ನೋಡುವ. ನಾವು ಹೇಗೂ ದಾರಿಯಲ್ಲಿ ಬಿದ್ದಿದ್ದೇವಲ್ಲ. ಅವರ ಹತ್ತಿರ ಮಾತಾಡಿದರೆ ಅವರು ನಮಗೆ ಏನಾದರೂ ಸಹಾಯ ಮಾಡಿಯಾರು' ಎಂದು ಪೊರಕೆಯಿಂದ ಕಸವನ್ನು